ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 15-18.
©*IIMRD*, Mysuru
IIMRD JOURNALS
www.iimrd.com

# ಮದ್ಯವ್ಯಸದಿಂದಾಗುವ ಸಮಸ್ಯೆಗಳು ಮತ್ತು ಸವಾಲುಗಳು

**ಶಿವರಾಜ ರಾಮಚಂದ್ರಗೌಡ***

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಾರಾಂಶ: (Abstract)**

*ಮದ್ಯಪಾನವು ಜಗತ್ತಿನಾದ್ಯಾದಂತ ಹರಡಿದ ವಿವಿಧ ಬಗೆಯ ಸಾಮಾಜಿಕ ಸಮಸ್ಯೆಗಳಲ್ಲಿ ಕೂಡ ಪ್ರಮುಖವಾದಂತಹ ಸಮಸ್ಯೆಯಾಗಿದೆ. ಪುರಾತನ ಕಾಲದಿಂದಲೂ ಕೂಡ ಮದ್ಯಪಾನ ಮಾಡುವುದನ್ನು ಕಾಣಬಹುದಾದರೂ ಆಧುನಿಕ ಸಮಾಜದಲ್ಲಿ ವ್ಯಸನವಾಗಿ ಮಾರ್ಪಟ್ಟಿದೆ. ಮದ್ಯವ್ಯಸನದಿಂದಾಗಿ ಅನೇಕ ದುಷ್ಪರಿಣಾಮಗಳಾಗುತ್ತಿದ್ದು, ವ್ಯಕ್ತಿ ಮಾತ್ರವಲ್ಲದೆ ಕುಟುಂಬ ಸಮಾಜ ವಿಘಟನೆಯಾಗುತ್ತಿದೆ. ಪ್ರಸ್ತುತ ಲೇಖದಲ್ಲಿ ಮದ್ಯವ್ಯಸನದಿಂದಾಗಿ ಯುವಕರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಮದ್ಯವ್ಯಸನ, ಯುವಕರು, ಕುಟುಂಬ, ವಿಘಟನೆ.

**ಪೀಠಿಕೆ**

ಮನುಷ್ಯನ ಬದುಕು ನೀರಿನ ಮೇಲಿನ ಗುಳ್ಳೆಯಂತೆ ಯಾವಾಗ ಬೇಕಾದರೂ ಒಡೆಯುವ ಸಂಭವವಿದೆ. ಬದಲಾದ ಜೀವನಶೈಲಿಯಿಂದ ಮನುಷ್ಯನ ಆಯುಷ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ವ್ಯಸನವೆಂಬುವುದು. ವಿಶ್ವದ 5 ಮಾರಕ ರೋಗರುಜೀನಗಳಲ್ಲಿ ಒಂದು ಎಂಬುವುದಾಗಿ 1956 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಹೇಳಿಕೆ ನೀಡಿದೆ.  ಮದ್ಯವ್ಯಸನ ಎಂದರೆ ಕುಡಿಯದೇ ಬದುಕಲು ಸಾಧ್ಯವಿಲ್ಲ ಎನ್ನವುಂತಹ ಅವಸ್ಥೆ. ವ್ಯಸನದಿಂದ ಕೂಡಿದ ವ್ಯಕ್ತಿಗೆ ತನ್ನ ಕುಡಿತದ ಬಗ್ಗೆ ಯಾವುದೇ ನಿಯಂತ್ರಣವಿರುವುದಿಲ್ಲ.

ಇಲಿಯಟ್ ಮತ್ತು ಮೆರಿಲ್‌ರವರ ಪ್ರಕಾರ **"**ಕುಡಿತದ ಅಭ್ಯಾಸ ಹಾಗೂ ವ್ಯಕ್ತಿಯ ವ್ಯಕ್ತಿತ್ವದಿಂದ ಸಂಭವಿಸುವ ಅವ್ಯವಸ್ಥೆ**"**ಯನ್ನೇ ಮದ್ಯಪಾನ ಎಂದು ತಿಳಿಸಿರುತ್ತಾರೆ. **ವಾಸ್ಕಿನ್** ಅವರು **"**ವ್ಯಕ್ತಿಯ ಮಾನಸಿಕ ತೊಂದರೆ ಅಥವಾ ಶಾರೀರಿಕ ಮತ್ತು ಮಾನಸಿಕ ಆರೋಗ್ಯ, ಪರಸ್ಪರ ಸಂಬಂಧಗಳು ಅಥವಾ ಆತನ ಸಲೀಸಾಗಿ ನಿರ್ವಹಿಸುವಂತಹ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಗಳು ಕೆಡುವಂತಹ ಪರಿಸ್ಥಿತಿಗೆ ಮದ್ಯ ಸೇವಿಸುವುದನ್ನು ಅತಿಪಾನತೆ ಎನ್ನಲಾಗುತ್ತದೆ. **ಪಾಲ್ ಜಾನೆಟ್‌ರವರ** ಪ್ರಕಾರ **"**ಮದ್ಯಪಾನವೆಂಬುದು ಒಂದು ರಾಸಾಯಿನಿಕ ದ್ರವವಾಗಿದ್ದು, ಅದರ ನಿರಂತರ ಸೇವನೆಯಿಂದ ವ್ಯಕ್ತಿಯು ಅದಕ್ಕೆ ಸಂಪೂರ್ಣವಾಗಿ ಹೊಂದಿಕೊಂಡು ಅದರ ದಾಸನಾಗಿಬಿಡುತ್ತಾನೆ.**"**

*Please cite this article as: ಶಿವರಾಜ ರಾಮಚಂದ್ರಗೌಡ.* (2022). ಮದ್ಯವ್ಯಸದಿಂದಾಗುವ ಸಮಸ್ಯೆಗಳು ಮತ್ತು ಸವಾಲುಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 15–18.*

**ಮದ್ಯವ್ಯನದಿಂದಾಗುವ ಸಮಸ್ಯೆ ಮತ್ತು ಸಾವಲುಗಳು**

ಸಮಾಜದಲ್ಲಿ ಅನೇಕ ಸಮಸ್ಯೆಗಳಿರುವಂತೆ ಮದ್ಯವ್ಯಸನವು ಕೂಡ ಒಂದಾಗಿದೆ. ಮದ್ಯಸೇವನೆ ಜಗತ್ತಿನ ಸಮಾಜದ ವೈಯಕ್ತಿಕ ಜವಬ್ದಾರಿ ಮತ್ತು ಮದ್ಯಪಾನದ ಕೆಡುಕುಗಳ ಬಗ್ಗೆ ಚಿಂತಿಸದೆ ಇವರು ಯುವಕರು ಮದ್ಯಪಾನ ಮಾಡುತ್ತಾರೆ. ಇಂಥವರನ್ನು ಅಲಸಿಗಳು ಅಶಕ್ತರು, ಮೈಗಳ್ಳರು ಎಂದು ಇನ್ನೂ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಇಂದಿನ ಆಗು–ಹೋಗುಗಳು, ಕಷ್ಟ ಸುಖಗಳ ಬಗ್ಗೆ ಚಿಂತಿಸದ ಇವರಿಗೆ ಕುಡಿಯುವುದೊಂದು ಕಾಯಕವಾಗುತ್ತದೆ. ತಾವು ಕುಡಿಯುವುದಲ್ಲದೆ ಸಮಾಜಿಕ ಹಾಗೂ ಕೌಟುಂಬಿಕ ನೆಮ್ಮದಿ ಹಾಳು ಮಾಡುತ್ತಾರೆ. ಇದರಿಂದ ಸಮಾಜವು ಏನು ಅಭಿವೃದ್ಧಿಯಾಗದೆ ನಿಂತ ನೀರಿನಂತೆ ಆಗುತ್ತದೆ. ಮದ್ಯಪಾನ ಇವತ್ತಿನ ಯುವಜನರನ್ನು ತನ್ನ ವಶಕ್ಕೆ ಪಡೆದುಕೊಂಡಿದೆ.

**ಆರ್ಥಿಕ ಸಮಸ್ಯೆ**

ಸಾಮಾನ್ಯವಾಗಿ ದುಡಿಯುವ ಜನರು ಈ ಚಟಕ್ಕೆ ಅಂಟಿಕೊಳ್ಳುತ್ತಾರೆ ದುಡಿದ ಹಣವನ್ನೆಲ್ಲ ಕುಡಿತಕ್ಕೆ ಬಳಸುವುದಲ್ಲದೇ ಮನೆಯಲ್ಲಿರುವ ವಸ್ತುಗಳನ್ನು ಮಾರಾಟ ಮಾಡಿ ಮದ್ಯಪಾನ ಮಾಡುವುದನ್ನು ಕಾಣಬಹುದಾಗಿದೆ. ಕೆಲವರು ಕಷ್ಟಕರವಾದ ಕೆಲಸಗಳಲ್ಲಿ ತೊಡಗಿಕೊಳ್ಳುವುದ್ದರಿಂದ ಆಯಾಸ ನೀಗಲು ಮದ್ಯಪಾನ ಮಾಡುವುದನ್ನು ಕಾಣುತ್ತೇವೆ. ಉದಾ: ಮನೆ ಕಟ್ಟುವವರು, ಕಾಡಿನ ಪ್ರದೇಶದಲ್ಲಿ ದುಡಿಯುವವರು, ರಸ್ತೆಯಲ್ಲಿ ಜೆಲ್ಲಿ ಕೆಲಸ ಮಾಡುವವರು, ಚರಂಡಿ ತೆಗೆಯುವವರು, ಪಾಯಖಾನೆ ಕೆಲಸ ಮಾಡುವವರು ಮದ್ಯಪಾನ ಮಾಡುವ ಸಾಧ್ಯತೆ ಹೆಚ್ಚು ಇರುತ್ತದೆ.

**ಬಡತನ ಮತ್ತು ನಿರುದ್ಯೋಗ**

ದೇಶದಲ್ಲಿ ವ್ಯಾಪಕವಾಗಿರುವ ಸಮಸ್ಯೆಗಳಲ್ಲಿ ಬಡತನ ಹಾಗೂ ನಿರುದ್ಯೋಗಗಳು ಮುಖ್ಯವಾಗಿವೆ. ಉದ್ಯೋಗಕ್ಕಾಗಿ ಅಲೆಯುವ ತರುಣ ತರುಣಿಯರು ಜೀವನದಲ್ಲಿ ಅತಿಯಾದ ಬೇಸರ ಮೂಡಿ ಮದ್ಯಪಾನಿಗಳಾಗುತ್ತಾರೆ. ಅನಿರೀಕ್ಷಿತವಾಗಿ ಕಳೆದುಕೊಳ್ಳುವ ಕೆಲಸದಿಂದಾಗಿಯೂ ಕೆಲವರು ಮದ್ಯಪಾನಕ್ಕೆ ಬಲಿಯಾಗುತ್ತಾರೆ. ಕಡು ಬಡತನದ ಬೇಗೆಯಲ್ಲಿ ತಮ್ಮ ಕರಾಳು ದಿನಗಳನ್ನು ಕಳೆಯುವವವರು ದಾರಿ ಕಾಣದಂತೆ ತಮ್ಮ ಚಿಂತಾಜನಕ ಪರಿಸ್ಥಿತಿಯನ್ನು ನೆನೆದು ಸಮಾಧಾನ ಪಡೆದುಕೊಳ್ಳುವ ಸಲುವಾಗಿ ಸಾಲ ಮಾಡಿಯಾದರೂ ಕುಡಿದು ದೊಡ್ಡ ಸಾಲದ ಹೊರೆಗಾರರಾಗಿರುತ್ತಾರೆ ಅದ್ದರಿಂದ ಬಡತನ ಆ ವ್ಯಕ್ತಿಗೆ ಶಾಶ್ವತವಾಗಿ ಬಿಡುತ್ತದೆ.

**ಕುಟುಂಬದ ಮೇಲಾಗುವ ದುಷ್ಪರಿಣಾಮಗಳು**

ಕುಡಿತ ಎಂಬುವುದು ಒಂದು ಚಟವಾಗಿ ಪರಿಣಮಿಸಿದಾಗ ಕುಟುಂಬದ ಹಿರಿಯ ವ್ಯಕ್ತಿಯು ಒಂದು ವೇಳೆ ಮದ್ಯಕ್ಕೆ ದಾಸನಾದರೆ ಅವನ ಸ್ಥಾನಮಾನ ಗೌರವ ಸಂಸಾರದ ನೆಮ್ಮದಿ ಹಾಳಾಗಿ ಹೋಗುತ್ತದೆ. ಅದರಂತೆ ಕುಟುಂಬದ ಯಜಮಾನಿ ಮಿತಿ ಮೀರಿ ಕುಡಿಯಲಾರಂಭಿಸಿದರೆ ಅವರ ವೈವಾಹಿಕ ಸಂಬಂಧಗಳು ಉತ್ತಮವಾಗಿರಲು ಸಾಧ್ಯವಾಗುವುದಿಲ್ಲ. ಈ ಕುಡಿತದ ಅಭ್ಯಾಸದಿಂದಾಗಿ ಉದ್ಯೋಗ ಕಳೆದುಕೊಂಡವರು ಆಸ್ತಿ ಹಾಗೂ ಹೆಂಡತಿ ಮಕ್ಕಳನ್ನು ಕಳೆದುಕೊಂಡವರ ಸಂಖ್ಯೆ ಅತಿಯಾಗಿದೆ.

**ದೈಹಿಕ ಆರೋಗ್ಯದ ಹಾನಿ**

ಮದ್ಯಪಾನ ಮನುಷ್ಯನ ಆರೋಗ್ಯದ ಮೇಲೆ ಬಾರಿ ಪ್ರಭಾವವವನ್ನು ಬೀರುತ್ತದೆ. ಇದೊಂದು ವಿನಾಶಕರಿ ಸ್ವರೂಪ ಉಳ್ಳದ್ದಾಗಿದೆ. ಒಂದು ಬಾರಿ ವ್ಯಕ್ತಿಯು ಮದ್ಯಕ್ಕೆ ದಾಸನಾದರೆ ಅದರಿಂದ ಮುಕ್ತಿ ಹೊಂದುವುದು ಬಾರಿ ಪ್ರಯಾಸದ ಕೆಲಸವೇ ಸರಿ. ಇಂಥವರನ್ನು ಮದ್ಯವ್ಯಸನಿಗಳೆಂದು ಕರೆಯಬಹುದಾಗಿದೆ. ವಿಜ್ಞಾನಿಗಳ ಸಂಶೋಧನೆಗಳಿಂದ ತಿಳಿದು ಬರುವ ಅಂಶವೆನೆಂದರೆ ಅತ್ಯಂತ ಪ್ರಾಚೀನ ಮಾದಕ ವಸ್ತುವಾದ ಅಲ್ಕೋಹಾಲ್ ಸುಮಾರು 200 ದಶಲಕ್ಷ ವರ್ಷಗಳಿಂದಲೂ ಬಳಕೆಯಲ್ಲಿದೆ. ಆಲ್ಕೋಹಾಲ್ ವ್ಯಕ್ತಿಯ ದೇಹಕ್ಕೆ ಅಪಾರ ಹಾನಿಯನ್ನುಂಟು ಮಾಡುತ್ತದೆ.

**ಮಾನಹಾನಿ**

ಸಮಾಜದಲ್ಲಿ ವ್ಯಕ್ತಿಯ ವ್ಯಕ್ತಿತ್ವವು ಹತ್ತು ಹಲವಾರು ಅಂಶಗಳನ್ನು ಆಧಾರವಗಿ ಹೊಂದಿರುತ್ತದೆ. ಕುಡಕರನ್ನು ಸಮಾಜ ಕುಡಕರೆಂದೇ ಕರೆಯುತ್ತದೆ. ಜೊತೆಗೆ ಸಮಾಜದ ಸದಸ್ಯರ ನಡುವೆ ಕುಟುಂಬದಲ್ಲಿ ಮಕ್ಕಳೊಂದಿಗೆ ಆತನಿಗೆ ಬೆಲೆ ಇರುವುದಿಲ್ಲ ಮಿತಿಮೀರಿ ಕುಡಿಯುವುದರಿಂದ ಮಾನ ಹಾನಿ ಹೆಚ್ಚುತ್ತದೆ. ಜನ ಕುಡುಕರಿಗೆ ಅಗೌರವನ್ನು ನೀಡುವಂತಹ ಮತ್ತು ಅವರ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನಾಡುವ, ವ್ಯಂಗವಾಗಿ ನಿಂದಿಸುವುದನ್ನು ಕುಡಿತಕ್ಕೆ ಒಳಗಾದವರಲ್ಲಿ ಕಾಣಬಹುದಾಗಿದೆ. ಅದಲ್ಲದೆ ಅವರ ಹೆಂಡತಿ ಮಕ್ಕಳಿಗೆ ಅಪಾಹಾಸ್ಯ ಮಾಡುವುದನ್ನು ಮತ್ತು ಚುಚ್ಚು ಮಾತುಗಳನ್ನಾಡಿ ನಿಂದಿಸುವುದನ್ನು ಈ ಸಮಾಜದಲ್ಲಿ ಕಾಣತ್ತೇವೆ.

**ಧನಹಾನಿ**

ಮದ್ಯಪಾನವನ್ನು ಸಮಾಜಶಸ್ತ್ರಜ್ಞರು ಒಂದು ಸಾಂಕ್ರಾಮಿಕ ರೋಗಕ್ಕೆ ಹೋಲಿಸಿದ್ದಾರೆ. ಇದು ಒಂದು ಕುಟುಂಬದ ಅವನತಿಗೆ ಕಾರಣವಾಗುತ್ತದೆ. ನಾಲ್ಕು ತಲೆಮಾರುಗಳು ಕಳೆದರೂ ಕುಳಿತು ತಿನ್ನುವಷ್ಟು ಹೊಂದಿದ್ದಂತಹ ಎಷ್ಟೋ ಕುಟುಂಬಗಳು ಈ ಕುಡಿತದ ಹಾವಳಿಗೆ ಸಿಕ್ಕಿ ನಾಶವಾಗಿ ಹೋಗಿವೆ. ಜೊತೆಗೆ ಅವರು ಕೂಲಿ ಕಾರ್ಮಿಕರಾಗಿದ್ದಾರೆ. ಎಷ್ಟೋ ಜನ ಶ್ರೀಮಂತ ಜಮೀನುದಾರರು, ವ್ಯಾಪಾರಿಗಳು ಈ ಕುಡಿತ ಅಪಾರ ಧನಹಾನಿಯನ್ನು ಅನುಭವಿಸಿ ದೈಹಿಕ ಹಾಗೂ ಆರ್ಥಿಕ ಸ್ಥಿತಿ ಹದಗೆಡಲು ಕಾರಣವಾಗಿದೆ.

**ಆತ್ಮಹತ್ಯೆ**

ಅತಿಯಾದ ಕುಡಿತಕ್ಕೆ ಶರೀರ ತೋರುವಂತಹ ಪ್ರತಿಕ್ರಿಯೆಗೆ ಹ್ಯಾಂಗೋವರ್ ಎಂದು ಕರೆಯುವರು. ಇದರ ಲಕ್ಷಣಗಳೆಂದರೆ ವಾಕರಿಕೆ ತಲೆನೋವು ಹಾಸಿಗೆ ಬಿಟ್ಟು ಏಳಲು ಆಗದಿರುವುದು. ಲವಲವಕೆ ಮಾಯಾವಾಗುವುದು, ಮನಸ್ಸಿಗೆ ಕಳವಳ ದೇಹಕ್ಕೆ ದಣಿವು ಮತ್ತು ಆಲ್ಕೋಹಾಲ್ ರಕ್ತಕ್ಕೆ ಸೇರಿದರೆ ವಿವೇಕ ಕುಗ್ಗುವದಲ್ಲದೆ ದಿನನಿತ್ಯದ ಚಟುವಟಿಕೆಗಳ ಮೇಲೆ ನಿಯಂತ್ರಣ ಕಳೆದು ಹೋಗುತ್ತದೆ, ಮಾತು ತೊದಲುತ್ತದೆ ನಿಶಕ್ತಿಯಿಂದ ನಿಲ್ಲಲಾಗುವುದಿಲ್ಲ ವಾಂತಿಯಾಗುತ್ತದೆ. ಇದರಿಂದ ಜೀವಕಣಗಳು ನಾಶವಾಗಿ ಉಸಿರಾಟದ ತೊಂದರೆಯಾಗಿ ವ್ಯಕ್ತಿ ಮರಣ ಹೊಂದಲು ಸಾಧ್ಯವಾಗುತ್ತದೆ. ಆದ್ದರಿಂದ ಇಂತಹ ವ್ಯಕ್ತಿಗಳು ಸಾಕಷ್ಟು ವಿಶ್ರಾಂತಿ ಪಡೆಯುವುದು, ಹಾಲಿಲ್ಲದ ಕಾಫಿ ಕುಡಿಯುವುದು ಒಳ್ಳೆಯ ಗಾಳಿ ಸೇವಿಸುವುದು ನಿತ್ಯ ಸ್ನಾನ ವ್ಯಾಯಮಗಳಿಂದ ಈ ಸಮಸ್ಯೆಗೆ ಸ್ವಲ್ಪ ಮಟ್ಟಿನ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.

**ಉಪಸಂಹಾರ**

ಯುವಕರ ಮೇಲೆ ಕೆಲವೊಮ್ಮೆ ಅನಿರೀಕ್ಷಿತ ಘಟನೆಗಳು ಮನಸ್ಸಿಗೆ ನೋವುಂಟು ಮಾಡುತ್ತವೆ. ಇಂತಹ ತೀವ್ರ ತರವಾದ ಆತಂಕ ಒತ್ತಡಗಳಿಂದ ಕೂಡಿದ ಮನೋಬೇನೆಗಳಿಗೆ ಕಾರಣ ಇಂದು ನಿನ್ನೆಯದ್ದಲ್ಲ. ಬೇಲಿ ಎದ್ದು ಹೋಲ ಮೇಯಿದಂತೆ ಯುವಕರ ದುಶ್ಚಟಗಳಿಗೆ ಕಡಿವಾಣ ಹಾಕಬೇಕಾದ ಸರ್ಕಾರಗಳೇ ಹಿಡಿ ರಾಜ್ಯಕ್ಕೆ ಮದ್ಯವನ್ನು ಹಂಚುವ ಕೆಲಸ ಮಾಡುತ್ತಿರುವುದು ವಿಪರ್ಯಾಸವೇ ಸರಿ. ರಾಜ್ಯದ ಜನತೆಯ ಉತ್ತಮ ಆರೋಗ್ಯ ಸಬಲೀಕರಣದ ದೃಷ್ಟಿಯಿಂದ ನಿಷೇಧಗೊಳಿಸಬೇಕಾಗಿತ್ತು. ಆದರೆ ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಹೊಸ ಹೊಸ ಅಂಗಡಿಗಳಿಗೆ ಪರವಾನಿಗೆ ನೀಡಿ ತಮ್ಮ ಆದಾಯ ಅಥವಾ ಸರ್ಕಾರದ ಆದಾಯ ಹೆಚ್ಚಿಸಿಕೊಳ್ಳುವ ಹುಚ್ಚುತನದ ನೀತಿಗಳು ಸಮಾಜದ ಜನತೆಯ ನೆಮ್ಮದಿಯನ್ನು ಹಾಳುಮಾಡಿವೆ. ಸಂಸಾರಗಳನ್ನು ಬೀದಿ ಪಾಲುಮಾಡಿವೆ. ಇಂತಹ ಹಲವಾರು ಚಟಗಳಿಂದಾಗಿ ಯುವ ಜನತೆ ದಾರಿ ತಪ್ಪುತ್ತಿದೆ. ಯುವಕರು ಮಾತ್ರವಲ್ಲ ಇತ್ತೀಚೆಗೆ ಯುವತಿಯರು ಮದ್ಯಪಾನಕ್ಕೆ ದಾಸರಾಗಿ ತಮ್ಮ ಸುಂದರವಾದ ಬದುಕನ್ನು ಹಾಳು ಮಾಡಿಕೊಂಡು ಬದುಕು ದೂಡುತ್ತಿದ್ದಾರೆ. ಸರ್ಕಾರ ಇದರ ಕಡೆಗೆ ಗಮನಹರಿಸಿ ಸಮಾಜವನ್ನು ಸಂರಕ್ಷಿಸುವುದು ಅತ್ಯವಶ್ಯಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಶೋಕ. (2008). ಅಧುನಿಕ ಅಪರಾಧಶಾಸ್ತ್ರ. ಸುಧಾ ಪ್ರಕಾಶನ, ಮೈಸೂರು,
- ಓಬಳೇಶಘಟ್ಟಿ ಆರ್. (2005). ಭಾರತೀಯ ಪ್ರಚಲಿತ ಸಾಮಾಜಿಕ ಸಮಸ್ಯೆಗಳು. ವಿದ್ಯಾನಿಧಿ ಪ್ರಕಾಶನ ಗದಗ.
- ನಾಗಲೋಟಮಠ ಸ. ಜ. (1991). ಮದ್ಯಪಾನದ ದುಷ್ಪರಿಣಾಮಗಳು. ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ, ಇಳಕಲ್ಲ.
- ಬೈರಪ್ಪ ಕೆ. (2008). ಭಾರತೀಯ ಸಾಮಾಜಿಕ ಸಮಸ್ಯೆಗಳು–1, ಸಿದ್ದಲಿಂಗಶ್ವೇರ ಪ್ರಕಾಶನ, ಗುಲಬರ್ಗಾ.
- ಶಂಕರ್‌ರಾವ್ ಚ.ನ. (2012). ಭಾರತದ ಸಾಮಾಜಿಕ ಸಮಸ್ಯೆಗಳ ಸಮಗ್ರ ನೋಟ. ಜೈ ಭಾರತ್ ಪ್ರಕಾಶನ, ಮಂಗಳೂರು.
- ಶೋಭದೇವಿ, ಚೆಕ್ಕಿ. (2009). ಭಾರತದ ಸಾಮಾಜಿಕ ಸಮಸ್ಯೆಗಳು–2, ಭಾವಿಕಟ್ಟಿ ಪ್ರಕಾಶನ ಗುಲ್ಬರ್ಗಾ.